ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 498/2025

ಸಿ ಡಬ್ಲ್ಯೂ– 2

ಪಿ ಡಬ್ಲ್ಯೂ– 2

ದಿಃ 20–12–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಸುಬ್ರಾಯ್ ಸಿದ್ದಿ |
| ತಂದೆಯ ಹೆಸರುಃ | ಕಾಸೀಮ್ |
| ವಯಸ್ಸುಃ | 49 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಿಳಾಸಃ | ಹಳವಳ್ಳಿ, ಅಂಕೋಲಾ |

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಮಾತನಾಡಲು ಮಾತ್ರ ಬರುತ್ತದೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಚಾಸಾ–1,3 ರಿಂದ 5 ಮತ್ತು ಮೃತ ಸಂಗೀತಾ ಸಿದ್ದಿ ರವರ ಪರಿಚಯವಿರುವುದಿಲ್ಲ. ಆರೋಪಿಯ ಪರಿಚಯವಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಪಂಚನಾಮೆಯಾಗಿದ್ದು, ಸಾಕ್ಷಿಯು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ–2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–2ಎ ಎಂದು ಗುರುತಿಸಲಾಯಿತು. ಸುಮಾರು 1 ವರ್ಷದ ಹಿಂದೆ ಸಹಿ ಹಾಕಿರುತ್ತೇನೆ. ಯಾವ ದಿನಾಂಕ ಎಂದು ಗೊತ್ತಿರುವುದಿಲ್ಲ. ನಾನು ಕೂಲಿ ಕೆಲಸಕ್ಕೆಂದು

ಹೋಗಿ ಬರುವಾಗ ಪೊಲೀಸರು ರಾಮನಗುಳಿಯ ಹತ್ತಿರ ಕರೆದು ನನ್ನ ಸಹಿಯನ್ನು ಪಡೆದಿರುತ್ತಾರೆ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ ಹಾಗೂ ಪೊಲೀಸರೂ ಸಹ ನನಗೆ ತಿಳಿಸಿರುವುದಿಲ್ಲ. ಸಹಿಯನ್ನು ಬೆಳಿಗ್ಗೆ 10 ಗಂಟೆಗೆ ಮಾಡಿರಬಹುದು. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುವನ್ನು ಹಾಗೂ ವಾಹನವನ್ನು ತೋರಿಸಿದ್ದಾಗಲಿ ಅಥವಾ ಜಪ್ತಿ ಮಾಡಿದ್ದಾಗಲಿ ಇರುವುದಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಕಚ್ಚಾ ನಕಾಶೆಯಾಗಿದ್ದು, ಸಾಕ್ಷಿಯು ಅದರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಕಚ್ಚಾ ನಕಾಶೆಯನ್ನು ನಿಪಿ–3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–3ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪಂಚನಾಮೆಗೆ ಸಹಿ ಹಾಕುವ ಸಂದರ್ಭದಲ್ಲಿಯೇ ಪೊಲೀಸರ ಕೋರಿಕೆ ಮೇರೆಗೆ ಹಾಕಿರುತ್ತೇನೆ. ಆದರೆ ಸದರಿ ದಾಖಲೆಯಲ್ಲಿ ಏನು ಬರೆಯಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ತಾವು ಇರುವ 4 ಪೊಟೋಗಳನ್ನು ನೋಡಿ ಗುರುತಿಸಿದ್ದು, ಪೊಟೋಗಳನ್ನು ನಿಪಿ–4 ರಿಂದ 7 ಎಂದು ಪುರಾವೆಗೆ ಒಳಪಟ್ಟು ಗುರುತಿಸಲಾಯಿತು. ಸದರಿ ಪೊಟೋಗಳನ್ನು ರಾಮನಗುಳಿಯ ಹತ್ತಿರ ತೆಗೆದಿದ್ದು, ಆದರೆ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ರಾಮನಗುಳಿಯ ಬಸ್ ಸ್ಟ್ಯಾಂಡ್ ಹತ್ತಿರ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ವಾಹನ ಇರುವ 2 ಪೊಟೋಗಳನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ, ಸದರಿ ದಾಖಲಾತಿ ಪಂಚನಾಮೆಯಾಗಿದ್ದು, ಸಾಕ್ಷಿಯು ಅದರ ಮೇಲಿರುವ ತಮ್ಮ ಸಹಿಯನ್ನು

ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಶವತನಿಖಾ ವರದಿಯ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಶವತನಿಖಾ ವರದಿಯನ್ನು ನಿಪಿ-8, ಸಾಕ್ಷಿಯ ಸಹಿಯನ್ನು ನಿಪಿ-8ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಹ ಸ್ಥಳದಲ್ಲೆ ಮಾಡಿದ್ದು, ಆದರೆ ಯಾವ ವಿಚಾರಕ್ಕಾಗಿ ಮಾಡಿರುತ್ತೇನೆ ಎಂದು ಗೊತ್ತಿರುವುದಿಲ್ಲ. ಸಹಿ ಮಾಡಿದ ದಿನಾಂಕ ಹೇಳಲು ಆಗುವುದಿಲ್ಲ. ಅದೇ ದಿನ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆಯಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ ಹಾಗೂ ಪೊಲೀಸರು ಸಹ ಓದಿ ಹೇಳಿರುವುದಿಲ್ಲ. ಸಾಕ್ಷಿಯು ತಾವು ಇರುವ 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಪೋಟೋಗಳನ್ನು ನಿಪಿ-9 ಮತ್ತು 10 ಎಂದು ಪುರಾವೆಗೆ ಒಳಪಟ್ಟು ಗುರುತಿಸಲಾಯಿತು. ಸದರಿ ಪೋಟೋಗಳನ್ನು ಎಲ್ಲಿ ತೆಗೆದಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಪೋಟೋದಲ್ಲಿ ಮೃತಪಟ್ಟ ವ್ಯಕ್ತಿಯು ಯಾರು ಎಂದು ನನಗೆ ಪರಿಚಯವಿರುವುದಿಲ್ಲ. ಸಾಕ್ಷಿಗೆ ಮೃತರ 2 ಪೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಪೋಟೋಗಳನ್ನು ಗುರುತಿಸುವಲ್ಲಿ ವಿಫಲರಾಗಿರುತ್ತಾರೆ. ಸಾಕ್ಷಿಯು 2 ನೋಟೀಸುಗಳ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ನೋಟೀಸುಗಳನ್ನು ನಿಪಿ-11 ಮತ್ತು 12, ಸಾಕ್ಷಿಯ ಸಹಿಗಳನ್ನು ನಿಪಿ-11ಎ ಮತ್ತು 12ಎ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಯಾವ ವಿಚಾರಕ್ಕಾಗಿ ಹಾಕಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ. ಅದರಲ್ಲಿ ಏನು ಬರೆಯಲಾಗಿದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಪೊಲೀಸರ ಕೋರಿಕೆ ಮೇರೆಗೆ ಸಹಿ ಹಾಕಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

<u>ಪಾಟಿ ಸವಾಲುಃ</u> ಮಾನ್ಯ ಎ.ಪಿ.ಪಿ.ಯವರಿಂದ

2. ನೀವು ಇಂದು ನ್ಯಾಯಾಲಯಕ್ಕೆ ಯಾರೊಂದಿಗೂ ಸಹ ಚರ್ಚೆ ಮಾಡದೇ ನೇರವಾಗಿ ಬಂದು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿ. ಅಂಕೋಲಾ ಪೊಲೀಸರು ಅಪಘಾತದ ಸ್ಥಳದ ಪಂಚನಾಮೆಗೆ ಹಾಗೂ ಶವಪಂಚನಾಮೆಗೆ ಬರಲು ನಿಮಗೆ ನೋಟೀಸನ್ನು ಏನಾದರೂ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ನಿಮಗೆ ನೋಟೀಸು ಕೊಟ್ಟು ಪಂಚರನ್ನಾಗಿ ಭರಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ–11 ಮತ್ತು 12 ಪಂಚನಾಮೆಗೆ ಬರಲು ಕೊಟ್ಟಂತಹ ನೋಟೀಸು ಎಂದರೆ ಸರಿಯಲ್ಲ. ನಿಪಿ–11 ಮತ್ತು 12 ರಲ್ಲಿ ಬರೆದ ವಿಷಯಗಳ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಪೊಲೀಸರ ಕೋರಿಕೆ ಮೇರೆಗೆ ರಾಮನಗುಳಿಯಲ್ಲಿ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. ದಿಃ31–12–2024 ರಂದು ಅಂಕೋಲಾ ತಾಲೂಕಿನ ರಾಮನಗುಳಿಯಲ್ಲಿ ಹಳವಳ್ಳಿ ಕಡೆಯಿಂದ ರಾಮನಗುಳಿ ಕಡೆಗೆ ಹಾಯ್ದಿರುವ ಸಿಮೆಂಟ್ ರಸ್ತೆಯ ಸೂಪರ್ ಮಾರ್ಕೆಟ್ ಶ್ಯಾಪ್ ಹತ್ತಿರ ಅಪಘಾತ ನಡೆದಿದ್ದು, ಆ ವಿಚಾರಕ್ಕೆ ಸಂಬಂಧಪಟ್ಟಂತೆ ಪ್ರತ್ಯಕ್ಷ

ಸಾಕ್ಷಿದಾರರಾದ ಚಾಸಾ-4 ರವರು ಸ್ಥಳ ತೋರಿಸಿ, ಮಾಹಿತಿ ನೀಡಿದ ಮೇರೆಗೆ ನಿಮ್ಮನ್ನು ಹಾಗೂ ಚಾಸಾ-3 ರವರನ್ನು ಭರಮಾಡಿಕೊಂಡು ಸಂಜೆ 4 ರಿಂದ 5.15 ಗಂಟೆಯವರೆಗೆ ಘಟನಾ ಸ್ಥಳದ ಪಂಚನಾಮೆ ಜರುಗಿಸಿ, ಪಂಚರಾಗಿ ನಿಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪಂಚಾನಾಮೆ ನಿಪಿ-2 ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ಬರೆದ ಎಲ್ಲ ವಿಷಯಗಳು ನಿಮಗೆ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯ ಸಂದರ್ಭದಲ್ಲಿ ನಿಪಿ-3 ರಂತೆ ಕಚ್ಚಾ ನಕಾಶೆಯನ್ನು ತಯಾರಿಸಿ, ನಿಮಗೂ ಸಹ ಸದರಿ ಸ್ಥಳದ ಮಾಹಿತಿ ನೀಡಿ, ಅದಕ್ಕೆ ನಿಮ್ಮ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದು ನಿಪಿ-3 ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ರಂತೆ ಪಂಚನಾಮೆ ಜರುಗಿಸಿ, ನಿಪಿ-3 ರಂತೆ ಕಚ್ಚಾ ನಕಾಶೆ ಬಿಡಿಸಿ, ಅಪಘಾತ ಸ್ಥಳದಲ್ಲಿ ನಿಪಿ-4 ರಿಂದ 7 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-4 ರಿಂದ 7 ಪಂಚನಾಮೆಯ ಸಂದರ್ಭದಲ್ಲಿ ಅಪಘಾತದ ಸ್ಥಳದಲ್ಲಿ ತೆಗೆದ ಫೋಟೋಗಳು ಆಗಿರುತ್ತವೆ ಎಂದರೆ ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ಪಂಚನಾಮೆಯ ಸಂದರ್ಭದಲ್ಲಿ ಅಪಘಾತಪಡಿಸಿದ ಹೊಂಡಾ ಶೈನ್ ಮೋಟರ್ ಸೈಕಲ್ ನಂ. ಕೆ ಎ 31 ಇ ಎಪ್ 8071 ನೆದ್ದನ್ನು ನಿಮಗೆ ತೋರಿಸಿ, ಪೊಲೀಸರು ಅದನ್ನು ಜಪ್ತಿಪಡಿಸಿ, ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನೀವು ಗುರುತಿಸಲಾದ ವಾಹನದ ಫೋಟೋಗಳು ಸದರಿ ಅಪಘಾತಪಡಿಸಿದ ವಾಹನದ ಫೋಟೋಗಳು ಆಗಿರುತ್ತವೆ ಎಂದರೆ ನನಗೆ ಗೊತ್ತಿರುವುದಿಲ್ಲ.

4. ದಿಃ 31-12-2024 ರಂದು ನಿಮ್ಮ,ಚಾಸಾ-3,5,6 ಹಾಗೂ ತನಿಖಾಧಿಕಾರಿ ಇವರ ಸಮಕ್ಷಮ ಅಂಕೋಲಾ ತಾಲೂಕಿನ ಸರಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಅಪಘಾತದಿಂದ ಮೃತಪಟ್ಟ ಸಂಗೀತಾ ಸಿದ್ಧಿ ಇವರ ಶವತನಿಖಾ ವರದಿಯನ್ನು ನಿಮ್ಮೆಲ್ಲರ ಸಮಕ್ಷಮ ಜರುಗಿಸಿ, ನಿಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯು ನಿಪಿ-8 ಆಗಿದ್ದು, ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನಿಮಗೆ ಗೊತ್ತಿದ್ದರೂ, ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಶವತನಿಖಾ ವರದಿಯ ಸಮಯದಲ್ಲಿ ನಿಪಿ-8 ರಂತೆ ಶವತನಿಖಾ ವರದಿಯನ್ನು ರಚಿಸಿ, ನಿಪಿ-9 ಮತ್ತು 10 ರಂತೆ ಫೋಟೋಗಳನ್ನು ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2,3,8,11 ಮತ್ತು 12 ರಲ್ಲಿ ಬರೆದ ವಿಚಾರಗಳ ಬಗ್ಗೆ ಸ್ಪಷ್ಟ ಹಾಗೂ ಸಂಪೂರ್ಣ ಮಾಹಿತಿ ಇದ್ದರೂ ಏನೂ ಮಾಹಿತಿ ಇಲ್ಲವೆಂಬಂತೆ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಎಲ್ಲ ದಾಖಲಾತಿಗಳಿಗೂ ರಾಮನಗುಳಿಯಲ್ಲಿ ಪೊಲೀಸರ ಕೋರಿಕೆ ಮೇರೆಗೆ ಸಹಿ ಹಾಕಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಮೃತೆ ಹಾಗೂ ಆರೋಪಿ, ಚಾಸಾ-1,3 ರಿಂದ 7 ರವರ ಪರಿಚಯವಿದ್ದರೂ ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ಆಪ್ತನೂ ಹಾಗೂ ಊರಿನವರು ಆಗಿರುವ ಕಾರಣ ಆತನಿಗೆ ಸಹಾಯವಾಗಲೆಂದು, ಆತನೊಂದಿಗೆ ಸಂಗನಮತ ಮಾಡಿಕೊಂಡು, ಆತನಿಗೆ ಸಹಾಯವಾಗುವ ರೀತಿಯಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲುಃ  ಆರೋಪಿತರ  ಪರ ವಕೀಲರಾದ ಶ್ರೀ ಡಿ.ಎನ್.ಎನ್  ಇವರಿಂದಃ

3.  ನೀವು ಸಹಿ ಮಾಡಿದ ದಾಖಲೆಯು ಖಾಲಿ ಹಾಳೆಯಾಗಿತ್ತು ಎಂದರೆ ಸರಿ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ., ಅಂಕೋಲಾ.